# ಕರ್ನಾಟಕ ಲೋಕಾಯುಕ್ತ

**ನಂ.ಕಂಪ್ಲೇಂಟ್/ಉಪಲೋಕ್/ಬಿಡಿ-1531/2016/ಡಿಆರ್‌ಇ-1**

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 19/6/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀ.ಸಿ.ಹನುಮಂತಪ್ಪ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕುರೂಡಿ ಗ್ರಾಮಪಂಚಾಯಿತಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಮತ್ತು (2) ಶ್ರೀ.ಎಂ.ಕಲ್ಲೇಶ್, ಲೈನ್‌ಮೆನ್, ಬೆಸ್ಕಾಂ, ಸಂಜಯನಗರ, ಬೆಂಗಳೂರು, – ಇವರ ವಿರುದ್ಧದ ನಡವಳಿ ಕುರಿತು.

******

1. ಶ್ರೀ.ಎ.ಎನ್.ಬಸವರಾಜು ಬಿನ್ ಬಿ.ನಂಜುಂಡಪ್ಪ, ಅನೂಡಿ ಗ್ರಾಮ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ತಹಶೀಲ್ದಾರ್, ಗೌರಿಬಿದನೂರು ತಾಲ್ಲೂಕು, (2) ಕಾರ್ಯನಿರ್ವಾಹಕ ಅಧಿಕಾರಿ, ಗೌರಿಬಿದನೂರು ತಾಲ್ಲೂಕು ಪಂಚಾಯಿತಿ, ಮತ್ತು (3) ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕುರೂಡಿ ಗ್ರಾಮಪಂಚಾಯಿತಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ ಕಲ್ಲೇಶ್ ಎಂ. ಬಿನ್ ಲೇಟ್ ಮಲ್ಲಪ್ಪ ಮತ್ತು ಮಾಲಾ ಕೋಂ ಕಲ್ಲೇಶ್ ಬೆಂಗಳೂರಿನಲ್ಲಿ ವಾಸವಿದ್ದು, ಕಲ್ಲೇಶ್ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯಲ್ಲಿ ನೌಕರರಾಗಿರುತ್ತಾರೆ. ಸದರಿಯವರು ಬೆಂಗಳೂರು ನಗರದ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಲ್ಲಿ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲ್ಲೂಕು ವಿಧಾನಸಭಾ ಕ್ಷೇತ್ರದಲ್ಲಿ ಅಕ್ರಮವಾಗಿ 2 ಕಡೆ ಗುರುತಿನ ಚೀಟಿಯನ್ನು ಪಡೆದಿರುತ್ತಾರೆ. ಕಲ್ಲೇಶ್ ಬೆಂಗಳೂರಿನಲ್ಲಿ ವಾಸವಿದ್ದರೂ ಸಹ ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು ಕಚೇರಿಯಿಂದ ಹಸಿರು ಪಡಿತರ ಚೀಟಿಯನ್ನು ಪಡೆದು ಸರ್ಕಾರಕ್ಕೆ ವಂಚಿಸಿರುತ್ತಾರೆ. ಗೌರಿಬಿದನೂರು ತಾಲ್ಲೂಕು, ಆನೂಡಿ ಗ್ರಾಮದಲ್ಲಿ ಸರ್ಕಾರದ ಅನುಮತಿ ಪಡೆಯದೆ ಭೂ ಸುಧಾರಣೆ ಕಾಯ್ದೆಯನ್ನು ಉಲ್ಲಂಘಿಸಿ ಕೃಷಿ ಭೂಮಿಯನ್ನು ತನ್ನ ಪತ್ನಿ ಮಾಲಾ ಹೆಸರಿನಲ್ಲಿ ಕ್ರಯ ಮಾಡಿರುತ್ತಾರೆ ಮತ್ತು ಸರ್ಕಾರಿ ಖರಾಬು ಜಮೀನನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರೂ ಸಹ ಅವರ ವಿರುದ್ಧ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ದೂರನ್ನು ಸಲ್ಲಿಸಿರುತ್ತಾರೆ.

3. ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. 1ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಜಿಲ್ಲಾಧಿಕಾರಿಗಳ ಸೂಚನೆಯಂತೆ ದೂರುದಾರರ ದೂರಿನ ಬಗ್ಗೆ ರಾಜಸ್ವ ನಿರೀಕ್ಷಕರವರಿಗೆ ಹಾಗೂ ಸದರಿ ಭಾಗದ ಮತಗಟ್ಟೆ ಮಟ್ಟದ ಅಧಿಕಾರಿಗೆ ಆನೂಡಿ ಗ್ರಾಮದಲ್ಲಿ ಖುದ್ದು ಪರಿಶೀಲನೆ ನಡೆಸಿ ಶ್ರೀ.ಕಲ್ಲೇಶ್ ಹಾಗೂ ಶ್ರೀಮತಿ.ಮಾಲಾರವರು ವಾಸವಾಗಿದ್ದಾರೆಯೇ, ಇಲ್ಲವೇ ಎಂಬುವರ ಬಗ್ಗೆ ಸೂಕ್ತ ವರದಿಯನ್ನು ನೀಡುವಂತೆ ತಿಳಿಸಲಾಗಿರುತ್ತದೆ. ಸದರಿ ಗ್ರಾಮದ ಗ್ರಾಮ ಲೆಕ್ಕಿಗರು, ರಾಜಸ್ವ ನಿರೀಕ್ಷಕರು ಖುದ್ದು ಸ್ಥಳ ಪರಿಶೀಲನೆ ನಡೆಸಿ ಸುಮಾರು ವರ್ಷಗಳಿಂದ ಸದರಿಯವರು ಆನೂಡಿ ಗ್ರಾಮದಲ್ಲಿ ವಾಸವಿರುವುದಿಲ್ಲವೆಂದು ಗ್ರಾಮಸ್ಥರ ಮಹಜರ್‌ನೊಂದಿಗೆ ವರದಿಯನ್ನು ನೀಡಿರುತ್ತಾರೆ ಹಾಗೂ ಮತಗಟ್ಟೆ ಮಟ್ಟದ ಅಧಿಕಾರಿಯವರು ಮತದಾರರ ಪಟ್ಟಿಯಿಂದ ಸದರಿಯವರ ಹೆಸರನ್ನು ಕೈಬಿಡಲು ನಮೂನೆ 7 ಮತ್ತು 21ಎ ನೋಟೀಸನ್ನು ಕಚೇರಿಗೆ ನೀಡಿದ್ದು, ಅದರಂತೆ ಸದರಿ ಅರ್ಜಿಗಳನ್ನು ಅಂಗೀಕರಿಸಿ ವಿಲೇ ಮಾಡಲಾಗಿದೆ. ಶ್ರೀ.ಕಲ್ಲೇಶ್ ಮತ್ತು ಶ್ರೀಮತಿ.ಮಾಲಾರವರ ಹೆಸರುಗಳನ್ನು ಭಾಗದ ಸಂ.81 ರ ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆಯೆಂದು ತಿಳಿಸಿರುತ್ತಾರೆ.

4. 2 ಮತ್ತು 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಶ್ರೀಮತಿ.ಮಾಲಾ ಕೋಂ ಕಲ್ಲೇಶ ಎಂಬುವರು ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ಆನೂಡಿ ಗ್ರಾಮದಲ್ಲಿನ ಸ.ನಂ.97 ರಲ್ಲಿ ನಿರ್ಮಿಸಿಕೊಂಡಿರುವ ವಾಸದ ಮನೆಗೆ ಗೃಹ ಬಳಕೆಗೆ ಬೇಕಾಗಿರುವ ವಿದ್ಯುಚ್ಛಕ್ತಿ ಸಂಪರ್ಕ ಪಡೆಯಲು ಕೆ.ಪಿ.ಟಿ.ಸಿ.ಎಲ್. ಇಲಾಖೆಗೆ ನಿರಾಕ್ಷೇಪಣ ಪತ್ರಕ್ಕಾಗಿ ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಿ ಸ್ಥಳ ತನಿಖೆ ಮಾಡಿದಾಗ ಶ್ರೀಮತಿ.ಮಾಲಾರವರು ಅವರಿಗೆ ಸಂಬಂಧಿಸಿದ ಆನೂಡಿ ಗ್ರಾಮದ ಸ.ನಂ.97 ರಲ್ಲಿ ವಾಸದ ಮನೆಯನ್ನು ನಿರ್ಮಿಸಿಕೊಂಡಿರುತ್ತಾರೆ. ಸದರಿ ಮನೆಯ ಬಗ್ಗೆ ಗ್ರಾಮಪಂಚಾಯಿತಿ ಅಸೆಸ್‌ಮೆಂಟ್ ರಿಜಿಸ್ಟರ್‌ನಲ್ಲಿ ಖಾತೆ ಸಂ.437 ಈ ಹಿಂದೆ ನಮೂದಾಗಿರುತ್ತದೆ. ಗ್ರಾಮಪಂಚಾಯಿತಿಯ ದಾಖಲೆಗಳನ್ನು ಹಾಗೂ ಸ್ಥಳದ ವಿದ್ಯಮಾನಗಳನ್ನು ಪರಿಶೀಲಿಸಿ ಹಾಗೂ ಸದರಿ ಅರ್ಜಿದಾರರು ಗ್ರಾಮಪಂಚಾಯಿತಿಗೆ ಯಾವುದೇ ಕಂದಾಯ ಬಾಕಿ ಇಲ್ಲದೇ ಇರುವುದರಿಂದ ಗ್ರಾಮಪಂಚಾಯಿತಿಯಿಂದ ನಿರಾಕ್ಷೇಪಣ ಪತ್ರವನ್ನು ನೀಡಲಾಗಿದೆ. ಇದರಲ್ಲಿ ಯಾವುದೇ ಅಕ್ರಮವಿರುವುದಿಲ್ಲವೆಂದು ಹೇಳಿರುತ್ತಾರೆ.

5. ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಕಲ್ಲೇಶ್ ಮತ್ತು ಮಾಲಾ ಇವರುಗಳು ಮೂಲತಃ ಅಮೃತಹಳ್ಳಿ, ಬೆಂಗಳೂರು–92 ರಲ್ಲಿ ವಾಸವಿರುತ್ತಾರೆ. ಕಲ್ಲೇಶ್‌ರವರು ಬೆಂಗಳೂರು ನಗರದ ವಿದ್ಯುತ್ ಸರಬರಾಜು ಕಂಪನಿಯ ಹೆಬ್ಬಾಳ ವಿಭಾಗದಲ್ಲಿ ಸಹಾಯಕ ಮಾರ್ಗದಾಳು ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸರಿಯಾಗಿ ಪರಿಶೀಲನೆ ನಡೆಸದೆ ಅಧಿಕಾರಿಗಳು ಮತದಾರರ ಪಟ್ಟಿಯಲ್ಲಿ ಅವರ ಹೆಸರುಗಳನ್ನು ಸೇರಿಸಿರುತ್ತಾರೆ. ಕಲ್ಲೇಶ್‌ರವರು ಸರ್ಕಾರಿ ಸೌಲಭ್ಯಗಳನ್ನು ಪಡೆದುಕೊಳ್ಳುವ ಸಲುವಾಗಿ ಕೆಲವು ಅಧಿಕಾರಿಗಳ ಜೊತೆ ಶಾಮೀಲಾಗಿ ಹಸಿರು ಪಡಿತರ ಚೀಟಿಯನ್ನು ಪಡೆದಿರುತ್ತಾರೆ. ಸರ್ಕಾರಿ

ಅಧಿಕಾರಿಗಳು ಕಲ್ಲೇಶ್‌ರವರಿಗೆ ಬಿ.ಪಿ.ಎಲ್ ಪಡಿತರ ಚೀಟಿಯನ್ನು ನೀಡಲು ಸಹಕರಿಸಿರುತ್ತಾರೆ. ಕಲ್ಲೇಶ್‌ರವರು ಆನೂಡಿ ಗ್ರಾಮದ ಸ.ನಂ.97 ರಲ್ಲಿ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ತಹಶೀಲ್ದಾರ್‌ರವರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ.

6. ತಹಶೀಲ್ದಾರ್‌ರವರ ಆಕ್ಷೇಪಣೆಯನ್ನು ಪರಿಶೀಲಿಸಿದಾಗ, ಕಲ್ಲೇಶ್ ಮತ್ತು ಮಾಲಾ ಇವರುಗಳು ಆನೂಡಿ ಗ್ರಾಮದ ಮತಗಟ್ಟೆಗೆ ಸಂಬಂಧಪಟ್ಟಂತೆ ಪಡೆದ ಮತದಾರರ ಗುರುತಿನ ಚೀಟಿಯನ್ನು ರದ್ದುಪಡಿಸಲಾಗಿದೆಯೆಂದು ವರದಿಯನ್ನು ನೀಡಿರುತ್ತಾರೆ. ಆದರೆ, ಕಲ್ಲೇಶ್ ಎನ್ನುವವರು ಸರ್ಕಾರಿ ನೌಕರಿಯಲ್ಲಿದ್ದರೂ ಸಹ ಬಿ.ಪಿ.ಎಲ್ ಪಡಿತರ ಚೀಟಿಯನ್ನು ಪಡೆದುಕೊಂಡಿರುತ್ತಾರೆ ಮತ್ತು ಸರ್ಕಾರಿ ಜಮೀನನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುತ್ತಾರೆಂದು ತಿಳಿಸಿದ್ದು, ಆ ಬಗ್ಗೆ ಎದುರುದಾರರಿಂದ ಯಾವುದೇ ಸಮಜಾಯಿಷಿ ಬಂದಿರುವುದಿಲ್ಲ. ಆದ್ದರಿಂದ, ಸದರಿ ಆಪಾದನೆಗಳ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಉಪ ವಿಭಾಗಾಧಿಕಾರಿ, ಚಿಕ್ಕಬಳ್ಳಾಪುರ ಉಪ ವಿಭಾಗ, ಚಿಕ್ಕಬಳ್ಳಾಪುರ ಇವರಿಗೆ ಆದೇಶಿಸಲಾಗಿತ್ತು.

7. ಉಪ ವಿಭಾಗಾಧಿಕಾರಿ, ಚಿಕ್ಕಬಳ್ಳಾಪುರ ಉಪ ವಿಭಾಗ, ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಶ್ರೀಮತಿ.ಮಾಲಾ ಕೋಂ ಕಲ್ಲೇಶ್ ರವರ ಹೆಸರಿಗೆ ಗ್ರಾಮಪಂಚಾಯಿತಿ ಕಾರ್ಯದರ್ಶಿಯ ಶಿಫಾರಸ್ಸು ಮೇರೆಗೆ ತಾಲ್ಲೂಕು ಕಚೇರಿ ಶಾಖೆಯಿಂದ ಪಡಿತರ ಚೀಟಿಯನ್ನು ನೀಡಲಾಗಿದ್ದು, ಅವರ ಪತಿ ಎನ್.ಕಲ್ಲೇಶ್‌ರವರು ಬೆಸ್ಕಾಂ, ಬೆಂಗಳೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆಂದು ತಿಳಿದುಬಂದ ಕಾರಣ ಸದರಿ ಪಡಿತರ ಚೀಟಿಯನ್ನು ರದ್ದುಪಡಿಸಿ ಸದರಿಯವರು ಮಾರ್ಚ್ 2015 ರಿಂದ ಡಿಸೆಂಬರ್ 2015 ರವರೆಗೆ ಪಡೆದುಕೊಂಡ ಬಿಪಿ.ಎಲ್. ಅಕ್ಕಿಯ ವಿತರಣೆಯ ಬೆಲೆಯನ್ನು ಎ.ಪಿ.ಎಲ್ ಬೆಲೆಯಲ್ಲಿ ನಿಗದಿ ಪಡಿಸಿ ಸರ್ಕಾರಕ್ಕೆ ಆಗಿರುವ ರೂ.2,400/- ನಷ್ಟವನ್ನು ಭರಿಸಿಕೊಳ್ಳಲಾಗಿದೆ.

8. ಆನೂಡಿ ಗ್ರಾಮದ ಸ.ನಂ.97 ರಲ್ಲಿ ಸದರಿಯವರು ಸರ್ಕಾರಿ ಭೂಮಿ ಒತ್ತುವರಿ ಮಾಡಿರುವ ಬಗ್ಗೆ ರಾಜಸ್ವ ನಿರೀಕ್ಷಕರು ಹಾಗೂ ತಾಲ್ಲೂಕು ಭೂಮಾಪಕರು ಪರಿಶೀಲಿಸಿ 0.33 ಗುಂಟೆ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡು ಸದರಿ ಸ್ಥಳದಲ್ಲಿ ಮನೆ ನಿರ್ಮಿಸಿಕೊಂಡಿರುತ್ತಾರೆ ಹಾಗೂ ವ್ಯವಸಾಯ ಮಾಡಿಕೊಂಡಿರುತ್ತಾರೆಂಬ ಆಪಾದನೆಯ ಬಗ್ಗೆ ಒತ್ತುವರಿಯನ್ನು ತೆರವುಗೊಳಿಸುವ ಸಂಬಂಧ ರಿಜಿಸ್ಟ್ರಾರ್, ಕರ್ನಾಟಕ ಭೂ ಕಬಳಿಕೆ ವಿಶೇಷ ನ್ಯಾಯಾಲಯ, ಬೆಂಗಳೂರು ಇವರಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಹೇಳಿರುತ್ತಾರೆ.

9. ಸರ್ಕಾರಿ ನೌಕರಿಯಲ್ಲಿದ್ದು, ಬಿ.ಪಿ.ಎಲ್. ಪಡಿತರ ಚೀಟಿ ಪಡೆದುಕೊಂಡ ಶ್ರೀ.ಕಲ್ಲೇಶ್ ಹಾಗೂ ಬಿ.ಪಿ.ಎಲ್. ಪಡಿತರ ಚೀಟಿ ನೀಡಲು ಕಾರಣರಾದ ಶ್ರೀ.ಹನುಮಂತಪ್ಪ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಇವರುಗಳನ್ನು ಈ ಪ್ರಕರಣದ 4 ಮತ್ತು 5ನೇ ಎದುರುದಾರರನ್ನಾಗಿ ಮಾಡಿ ಅವರಿಗೆ ಆಕ್ಷೇಪಣೆ ಸಲ್ಲಿಸುವಂತೆ ಆದೇಶಿಸಲಾಗಿತ್ತು.

10. 4ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ಶ್ರೀಮತಿ.ಮಾಲಾ ಕೋಂ ಕಲ್ಲೇಶ್ ರವರ ಮನೆಯು ಗ್ರಾಮಪಂಚಾಯಿತಿ ಅಸೆಸ್‌ಮೆಂಟ್ ರಿಜಿಸ್ಟರ್‌ನಲ್ಲಿ ದಾಖಲಾಗಿದ್ದು, ಅದರಂತೆ ಸದರಿಯವರಿಗೆ ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದ್ದು, ಅದರಂತೆ ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿದ್ದ ಎದುರುದಾರರು ಮತ್ತು ಗ್ರಾಮಪಂಚಾಯಿತಿಯ ಸಿಬ್ಬಂದಿಯವರು ನಿಯಮಬಾಹಿರವಾಗಿ ಅನುಮತಿ ನೀಡಿಲ್ಲ ಹಾಗೂ ಪಡಿತರ ಚೀಟಿ ರದ್ದುಪಡಿಸಿ ಸದರಿಯವರಿಂದ ದಂಡ ಕಟ್ಟಿಸಿಕೊಳ್ಳಲಾಗಿದೆಯೆಂದು ಹೇಳಿರುತ್ತಾರೆ.

11. 5ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ಎದುರುದಾರರ ಪತ್ನಿ ಶ್ರೀಮತಿ.ಮಾಲಾ ಇವರು ಗೌರಿಬಿದನೂರು ತಾಲ್ಲೂಕು, ಹೊಸೂರು ಹೋಬಳಿ, ಅನೂಡಿ ಗ್ರಾಮದಲ್ಲಿ ವ್ಯವಸಾಯ ಮಾಡಲು ಖುಷ್ಕಿ ಜಮೀನು ಖರೀದಿಸಿದ್ದು, ಅಲ್ಲಿಯೇ ವಾಸವಾಗಿದ್ದು, ಅವಿದ್ಯಾವಂತಳಾಗಿದ್ದು, ಕೂರೂಡಿ ಗ್ರಾಮಪಂಚಾಯಿತಿ ತಂತ್ರಾಂಶದಲ್ಲಿ ಕೇಳಿದ ವಿಚಾರಗಳಿಗೆ ಮಾಹಿತಿ ನೀಡಿ ಪಡಿತರ ಚೀಟಿ ಮತ್ತು ಮತದಾರರ ಚೀಟಿಯಲ್ಲಿ ಎದುರುದಾರರ ಹೆಸರನ್ನು ನೋಂದಾಯಿಸಿ ಪಡಿತರ ಚೀಟಿ ಮತ್ತು ಮತದಾರರ ಚೀಟಿಯನ್ನು ಪಡೆದುಕೊಂಡಿರುತ್ತಾರೆ. ಈ ವಿಷಯವು ಎದುರುದಾರರ ಗಮನಕ್ಕೆ ಬಂದಿದ್ದು, ಮತದಾರರ ಚೀಟಿ ಮತ್ತು ಪಡಿತರ ಚೀಟಿಯನ್ನು ರದ್ದು ಮಾಡಲು ಕ್ರಮಗಳನ್ನು ಕೈಗೊಂಡು ದಿ.7/8/16 ರಂದು ಅವರ ಹೆಸರನ್ನು ಮತದಾರರ ಪಟ್ಟಿಯಿಂದ ಕೈಬಿಡಲು ಕ್ರಮ ಕೈಗೊಳ್ಳಲಾಗಿದೆ. ಅವರುಗಳ ಹೆಸರನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆಯೆಂದು ಇಲಾಖೆಯಿಂದ ಹಿಂಬರಹ ನೀಡಲಾಗಿದೆ ಹಾಗೂ ಪಡಿತರ ಚೀಟಿಯನ್ನು ಇಲಾಖೆಗೆ ಹಿಂದಿರುಗಿಸಲಾಗಿದೆ.

12. ಸ.ನಂ.97 ರಲ್ಲಿ ಯಾವುದೇ ಕೃಷಿ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವುದಿಲ್ಲ. ಸ.ನಂ.97 ರಲ್ಲಿ ಅಂಜಿನಪ್ಪ ಎಂಬುವರಿಗೆ 2 ಎಕರೆ ಮಂಜೂರಾಗಿದ್ದು, ಅಂಜಿನಪ್ಪ ರವರು ಚನ್ನಯ್ಯ ಎಂಬುವರಿಗೆ ಮಾರಾಟ ಮಾಡಿದ್ದು, ಟಿ.ಚನ್ನಯ್ಯ ಮತ್ತು ಆತನ ತಮ್ಮ ಟಿ.ವೀರಭದ್ರಯ್ಯ ವಿಭಾಗ ಮಾಡಿಕೊಂಡು, ನಂತರ ಸದರಿಯವರು ಎದುರುದಾರರ ಪತ್ನಿ ಮಾಲಾರವರಿಗೆ ಮಾರಾಟ ಮಾಡಿರುತ್ತಾರೆ. ಶ್ರೀ.ರಾಮಾಜಿರಾವ್ ಎಂಬುವರಿಗೆ ಸ.ನಂ.97 ರಲ್ಲಿ ಸರ್ಕಾರದ ವತಿಯಿಂದ 2 ಎಕರೆ ಜಮೀನು ಮಂಜೂರಾಗಿದ್ದು, ಅವರ ನಿಧನದ ನಂತರ ಅವರ ಮಗ ಕೃಷ್ಣೋಜಿರಾವ್ ಹಾಗೂ ಮೊಮ್ಮಗ ನಾಗೇಂದ್ರರಾವ್ ಎಂಬುವರು ಆರ್.ನಾಗರಾಜು ಎಂಬುವರಿಗೆ, ಆರ್.ನಾಗರಾಜು ಎಂಬುವರು ಎಂ.ರಾಮಕೃಷ್ಣ ಮತ್ತು ಎಂ.ರಮೇಶ ಎಂಬುವರಿಗೆ ಮಾರಾಟ ಮಾಡಿದ್ದು, ಎಂ.ರಾಮಕೃಷ್ಣ ಮತ್ತು ಎಂ.ರಮೇಶ ರವರು ಶ್ರೀಮತಿ.ಮಾಲಾ ರವರಿಗೆ ಮಾರಾಟ ಮಾಡಿರುತ್ತಾರೆ. ಎದುರುದಾರರ ತಂದೆ, ತಾತ ಹಾಗೂ ಅವರ ಪತ್ನಿಯ ತಂದೆ ತಾತಾ ರವರು ಮೂಲತಃ ಕೃಷಿಕರಾಗಿದ್ದು, ಭೂ ಸುಧಾರಣೆ ಕಾಯಿದೆ ಉಲ್ಲಂಘಿಸಿ ಕೃಷಿ ಜಮೀನನ್ನು ಅಕ್ರಮವಾಗಿ ಖರೀದಿಸಿರುವುದಿಲ್ಲ. ಅಮೃತಹಳ್ಳಿ ಗ್ರಾಮದಲ್ಲಿ ನಿವೇಶನ ಸಂ.30 ಮತ್ತು 31 ನ್ನು ಮಾಲಾರವರ ತಂದೆ ದಾನವಾಗಿ ನೀಡಿರುತ್ತಾರೆ. ಅನೂಡಿ ಗ್ರಾಮದ ಹಳೆ ಸ.ನಂ.97 ರಲ್ಲಿ 4 ಎಕರೆ ಜಮೀನನ್ನು ಮಾಲಾರವರ ತಂದೆ ಖರೀದಿ ಮಾಡಿಕೊಟ್ಟಿರುತ್ತಾರೆ. ಹಸಿರು ಪಡಿತರ ಚೀಟಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಅಕ್ರಮವೆಸಗಿರುವುದಿಲ್ಲ ಹಾಗೂ ಪಡಿತರ

ಚೀಟಿಯನ್ನು ಉಪಯೋಗಿಸಿ ಸರ್ಕಾರಿ ನ್ಯಾಯಬೆಲೆ ಅಂಗಡಿಯಿಂದ ಏನನ್ನು ಖರೀದಿ ಮಾಡಿರುವುದಿಲ್ಲವೆಂದು, ದೂರುದಾರರು ನೀಡಿರುವ ದೂರಿನ ವಿಚಾರಗಳು ಸತ್ಯಕ್ಕೆ ದೂರವಾಗಿರುತ್ತವೆಯೆಂದು ಹೇಳಿರುತ್ತಾರೆ.

13. ದಾಖಲಾತಿ ಹಾಗೂ ವರದಿಯನ್ನು ಪರಿಶೀಲಿಸಿದಾಗ, 4ನೇ ಎದುರುದಾರರಾದ ಹನುಮಂತಪ್ಪ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಇವರ ಶಿಫಾರಸ್ಸಿನ ಮೇರೆಗೆ 5ನೇ ಎದುರುದಾರರಿಗೆ ಪಡಿತರ ಚೀಟಿಯನ್ನು ನೀಡಿರುವುದು ಕಂಡುಬರುತ್ತದೆ. 5ನೇ ಎದುರುದಾರರು ಸರ್ಕಾರಿ ನೌಕರಿಯಲ್ಲಿದ್ದರೂ ಸಹ ಮತ್ತು ಅವರು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಾಗಿಲ್ಲದಿದ್ದರೂ ಸಹ ಸದರಿ ಅಂಶಗಳನ್ನು ಪರಿಶೀಲಿಸದೆ 5ನೇ ಎದುರುದಾರರಿಗೆ ಬಿಪಿಎಲ್ ಪಡಿತರ ಚೀಟಿ ನೀಡಲು ಶಿಫಾರಸ್ಸು ಮಾಡಿ 4ನೇ ಎದುರುದಾರರು ಕರ್ತವ್ಯಲೋಪ ಎಸಗಿರುವುದು ಕಂಡುಬರುತ್ತದೆ.

14. 5ನೇ ಎದುರುದಾರರಾದ ಕಲ್ಲೇಶ್‌ರವರು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿಲ್ಲದಿದ್ದರೂ ಸಹ ಬಿಪಿಎಲ್ ಕಾರ್ಡನ್ನು ಪಡೆದು ಸೌಲಭ್ಯವನ್ನು ಪಡೆದುಕೊಂಡಿರುವುದು ಕಂಡುಬರುತ್ತದೆ. ಅಲ್ಲದೆ ಇಲಾಖೆಗೆ ಆದಾಯದ ಮೂಲವನ್ನು ತೋರಿಸದೆ ಜಮೀನು ಖರೀದಿ ಮಾಡಿರುವುದು ಕಂಡುಬರುತ್ತಿದ್ದು, ಜಮೀನು ಖರೀದಿ ಮಾಡಿದ ಬಗ್ಗೆ ಸಂಬಂಧಪಟ್ಟ ಇಲಾಖೆಗೆ ಮಾಹಿತಿಯನ್ನು ನೀಡಿರುವ ಬಗ್ಗೆ ಕೂಡ ಯಾವುದೇ ದಾಖಲಾತಿಗಳು ಕಂಡುಬರುತ್ತಿಲ್ಲ. ಮೇಲಿನ ಅಂಶಗಳನ್ನು ಗಮನಿಸಿದಾಗ, 5ನೇ ಎದುರುದಾರರು ಕರ್ನಾಟಕ ನಾಗರೀಕ ಸೇವಾ ನಿಯಮಗಳನ್ನು ಉಲ್ಲಂಘಿಸಿರುವುದು ಕಂಡುಬರುತ್ತದೆ.

15. ಮೇಲ್ಕಂಡ ಅಂಶಗಳನ್ನು ಗಮನಿಸಿದಾಗ, 4 ಮತ್ತು 5ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯು ಅವರ ಮೇಲಿನ ಆಪಾದನೆಯನ್ನು ಅಲ್ಲಗಳೆಯಲು ಸೂಕ್ತ ಹಾಗೂ ಸಮಂಜಸವಾಗಿರುವುದಿಲ್ಲ. ಆದ್ದರಿಂದ, 4ನೇ ಎದುರುದಾರರಾದ ಶ್ರೀ.ಸಿ.ಹನುಮಂತಪ್ಪ ಮತ್ತು 5ನೇ ಎದುರುದಾರರಾದ ಶ್ರೀ.ಎಂ.ಕಲ್ಲೇಶ್ ಇವರು ಶಿಸ್ತು ಕ್ರಮಕ್ಕೆ ಭಾದ್ಯಸ್ಥರಾಗಿರುತ್ತಾರೆ.

16. 4ನೇ ಎದುರುದಾರರಾದ ಶ್ರೀ.ಸಿ.ಹನುಮಂತಪ್ಪ ಮತ್ತು 5ನೇ ಎದುರುದಾರರಾದ ಶ್ರೀ.ಎಂ.ಕಲ್ಲೇಶ್ ಇವರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ನಿಯಮಗಳನ್ನು ಉಲ್ಲಂಘಿಸಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ, 4ನೇ ಎದುರುದಾರರಾದ ಶ್ರೀ.ಸಿ.ಹನುಮಂತಪ್ಪ ಮತ್ತು 5ನೇ ಎದುರುದಾರರಾದ ಶ್ರೀ.ಎಂ.ಕಲ್ಲೇಶ್ ಇವರು ವಿರುದ್ಧ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ,

ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

17. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 4/6

(ನ್ಯಾಯಮೂರ್ತಿ ಎನ್.ಆನಂದ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.